**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ8[4]ಶಾಶಿಅ ವೇತನ ಪರಿಷ್ಕರಣೆ ಇತರೆ 3/2012-13 ದಿ: 03.07.2012

**ಸುತ್ತೋಲೆ**

ವಿಷಯ: 2012ರ ಪರಿಷ್ಕೃತ ವೇತನ ಶ್ರೇಣಿಗಳನ್ನು ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳಿಗೆ ವಿಸ್ತರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ 7 ಎಸ್‌ಆರ್‌ಪಿ 2012 ದಿ: 21.04.2012

2. ಸರ್ಕಾರದ ಆದೇಶ ಸಂಖ್ಯೆ: ಇಡಿ 53 ಎಸ್‌ಟಿಬಿ 2012 ದಿ: 26.05.2012
3. ಈ ಕಛೇರಿಯ ಸಹನಿರ್ದೇಶಕರು-1, ಬೆಂಗಳೂರು ವಿಭಾಗ ಇವರ ಟಿಪ್ಪಣಿ ದಿ: 30.06.2012

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಸರ್ಕಾರವು ಉಲ್ಲೇಖ-1ರ ಅಧಿಸೂಚನೆಯಲ್ಲಿ ದಿ: 01.04.2012 ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವೇತನ ಶ್ರೇಣಿಗಳನ್ನು ಜಾರಿಗೊಳಿಸಿರುತ್ತದೆ. ನಂತರ ಈ ವೇತನ ಶ್ರೇಣಿ ಸೌಲಭ್ಯಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೂ ಉಲ್ಲೇಖ-2ರಂತೆ ವಿಸ್ತರಿಸಲಾಗಿದೆ. ಈ ಪೈಕಿ ಹಲವಾರು ಉಪನಿರ್ದೇಶಕರ ಕಛೇರಿಗಳಲ್ಲಿ ಶಿಕ್ಷಣ ಸಂಸ್ಥೆಗಳ ನೌಕರರಿಗೆ ವೇತನ ಪರಿಷ್ಕರಣೆ ಮಾಡುವಲ್ಲಿ ವಿಳಂಬ ಮಾಡುತ್ತಿದ್ದು, ಈ ಸಂಬಂಧ ಹೆಚ್.ಆರ್.ಎಂ.ಎಸ್ ಕೆಲಸಗಳೆಲ್ಲವ್ಯೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿಯೇ ನಡೆಯುತ್ತಿರುವುದರಿಂದ ಈ ಹಂತದಲ್ಲಿಯೇ ಅನುದಾನಿತ ಪ್ರೌಢಶಾಲಾ ಸಿಬ್ಬಂದಿಗೆ ಹೊಸ ವೇತನ ಶ್ರೇಣಿ ಸೌಲಭ್ಯಕ್ಕೆ ಅನುಮೋದನೆ ನೀಡುವಂತೆ ಕೆಲವೊಂದು ಸಂಘ ಸಂಸ್ಥೆಗಳು ಕೋರಿರುತ್ತಾರೆ. ಆದ್ದರಿಂದ ನೂತನ ವೇತನ ಶ್ರೇಣಿ ಪ್ರಸ್ತಾವನೆಗಳನ್ನು ದಿ: 31.07.2012ರೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ಅನುಮೋದನೆ ನೀಡಲು ಸುತ್ತೋಲೆ ಹೊರಡಿಸುವಂತೆ ಉಲ್ಲೇಖ-3ರಲ್ಲಿ ಸಹನಿರ್ದೇಶಕರು-1, ಬೆಂಗಳೂರು ವಿಭಾಗ ರವರು ಕೋರಿರುತ್ತಾರೆ. ಸದರಿ ಮನವಿಯಂತೆ ಉಲ್ಲೇಖ-1ರಲ್ಲಿ ಹೊಸ ವೇತನ ಶ್ರೇಣಿಗಳನ್ನು ಸರ್ಕಾರಿ ನೌಕರರಿಗೆ ಮಂಜೂರು ಮಾಡಿರುವುದನ್ನು ಉಲ್ಲೇಖ-2ರಲ್ಲಿ ಅನುದಾನಿತ ಶಾಲಾ ಶಿಕ್ಷಣ ಸಂಸ್ಥೆಗಳ ನೌಕರರಿಗೂ ವಿಸ್ತರಿಸಿರುವುದರಿಂದ ಈ ವೇತನ ಶ್ರೇಣಿ ಪರಿಷ್ಕರಿಸಿ ಮಂಜೂರು ಮಾಡುವ ಕ್ರಮವನ್ನು ಆಯಾ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿಯೇ ನಿಯಮಾನುಸಾರ ಪರಿಶೀಲಿಸಿ ಕ್ರಮ ಮಾಡಲು ಅನುಮತಿಸಿದೆ.

ನಿರ್ದೇಶಕರು(ಪ್ರೌಢ ಶಿಕ್ಷಣ)

ಗೆ

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ ಕಳುಹಿಸುತ್ತಾ, ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮೇಲ್ಕಂಡ ಸುತ್ತೋಲೆಯನ್ನು ರವಾನಿಸುವ ಬಗ್ಗೆ ಕ್ರಮ ವಹಿಸುವುದು.
2. ಕಛೇರಿ ಪ್ರತಿ.

\\10.96.135.22\typing3server\D\EST2\3085 13.doc